**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 791/2024**

ಸಿ ಡಬ್ಲ್ಯೂ 3

ಪಿ ಡಬ್ಲ್ಯೂ 4

**ಸಾಕ್ಷಿದಾರರ ಹೆಸರು** : ಪೀಕಪ್ಪ ಲಮಾಣಿ

**ತಂದೆಯ ಹೆಸರು** : ದೇವಲಪ್ಪ

**ವಯಸ್ಸು** : 60 ವರ್ಷ

**ಉದ್ಯೋಗ** : ವ್ಯವಸಾಯ

**ವಾಸ** : ಬಸರಿಕಟ್ಟಿ ತಾಂಡಾ .

**ದಿನಾಂಕಃ 22-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

1. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಲಾಗಿ ಅದು ಪಂಚನಾಮೆ ಆಗಿದ್ದು, ಅದರಲ್ಲಿರುವ ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಈಗ ಒಂದು ವರ್ಷದ ಹಿಂದೆ ಮಾರ್ಕೆಟ್ ನಲ್ಲಿ ನಿಪಿ-1 ಕ್ಕೆ ನಾನು ಹೆಬ್ಬೆಟ್ಟನ್ನು ಹಾಕಿರುತ್ತೇನೆ. ಯಾವ ವಿಷಯಕ್ಕಾಗಿ ನನ್ನ ಹೆಬ್ಬೆಟ್ಟು ಪಡೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೆ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ.

(**ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.**)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ದಿಃ 20-03-2024 ರಂದು ನನ್ನನ್ನು ಮತ್ತು ಚಾಸಾ-2 ರವರನ್ನು ಪಂಚರಾಗಿ ಸಹಕರಿಸಲು ರಾಣೇಬೆನ್ನೂರು ಶಹರ ಪೋಲಿಸರು ಕೇಳಿಕೊಂಡ ಮೇರೆಗೆ ನಾನು ಠಾಣೆಗೆ ಹೋಗಿದ್ದು ಅಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದ ವಿಚಾರ ತಿಳಿಸಿ, ದಾಳಿಯ ಕಾಲಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ನಮ್ಮನ್ನು ಶಂಕರ ಟಾಕೀಸ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯದ ಪೌಚುಗಳನ್ನು ಮಾರಾಟ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಆತನನ್ನು

ಹಿಡಿದು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಜೀವರಾಜ ನಾಯಕ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆತನ ಕೈಯಲ್ಲಿದ್ದ ಚೀಲವನ್ನು ಪರೀಶಿಲಿಸಿದಾಗ 90 ಎಂ ಎಲ್ ನ 48 ಹೈವರ್ಡ್ಸ ವಿಸ್ಕಿಯ ಪೌಚುಗಳು ಸಿಕ್ಕಿದ್ದವು ಎಂದರೆ ಸರಿಯಲ್ಲ. ವಿಚಾರಣೆ ಮಾಡಿದಾಗ ಅವುಗಳನ್ನು ಮಾರಾಟ ಮಾಡಲು ಯಾವುದೆ ಪಾಸ ಪರ್ಮಿಟ್ ಇಲ್ಲ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಆ ವಸ್ತುಗಳನ್ನು ಜಪ್ತು ಪಡಿಸಿಕೊಂಡು ಬಿಳಿಯ ಚೀಲದಲ್ಲಿ ಪ್ಯಾಕ್ ಮಾಡಿ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನಗೆ ಓದಿ ಹೇಳಿ ಪಂಚನಾಮೆಗೆ ಹೆಬ್ಬೆಟ್ಟಿನ ಗುರುತು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.